

ಜೀವ ಬಿಟ್ಟುಬಿಟ್ಟಿದ್ದಳು. ಬೆಳಿಗ್ಗೆ ನಾನು, ಮಾವ ಅಕ್ಕನನ್ನು ಏಳಿಸಲು ಹೋದಾಗ ಗೊತ್ತಾಯ್ತು. ಸಿದ್ದೇಗೌಡರಿಗೆ ವಿಷಯ ಮುಟ್ಟಿ ಅವರೂ ಬಂದರು. ನಾನು, ಮಾವ, ಸಿದ್ದೇಗೌಡರು, ಅವರ ಹಿರಿಯ ಮಗ ಎಲ್ಲರೂ ಸೇರಿ ಅಕ್ಕನ ಶವವನ್ನು ಈಚೆ ಜಗುಲಿಗೆ ತಂದು ಮಲಗಿಸಿದೆವು. ಮಾವ ದಿಕ್ಕು ತೋಚದೆ ಮೂಲೆಯಲ್ಲಿ ಕೂತುಬಿಟ್ಟಿದ್ದರು. ನಾನು ಬಂದವರಿಗೆ ಅದು ಇದು ಸಹಾಯ ಮಾಡಿದೆ. ಸಿದ್ದೇಗೌಡರು ಮಾವನಿಗೆ ಧೈರ್ಯ ತುಂಬುತ್ತಿದ್ದರು. ಆದರೆ, ನಿನ್ನೆ ದಿನ ಮಾವ 'ನಿನ್ನ ಅಕ್ಕ ನಿನ್ನ ಕೈಬಿಟ್ಟು ಹೊರಟು ಹೋದರೆ, ನಿನಗೆ ಮುಂದೆ ಯಾರು ದಿಕ್ಕು? ನನಗೂ ವಯಸ್ಸಾಯ್ತು ಬಂತು' ಎಂದು ನನಗೆ ಹೇಳಿದ ಮಾತು ನನ್ನ ಮನಸ್ಸಿನಲ್ಲಿ ಕೊರೆಯುತ್ತಲೇ ಕುಳಿತ್ತಿತ್ತು. ನಾನೂ ಇನ್ನು ಮುಂದೆ ತಬ್ಬಲಿಯಾಗುತ್ತೇನೇನೋ! ಎಂಬ ಪ್ರಶ್ನೆಯೂ ನನಗೆ ಎದುರಾಗಿತ್ತು.

3

ಅಕ್ಕನ ಶವಸಂಸ್ಕಾರ, ಉತ್ತರಕ್ರಿಯಾದಿ, ತಿಂಗಳ ತಿಥಿ, ತಿಥಿಗೆ ಬಂದ ಜನಕ್ಕೆ ಊಟ ಎಲ್ಲವನ್ನೂ ಸಿದ್ದೇಗೌಡರೇ ಮುಂದೆ ನಿಂತು ನೆರವೇರಿಸಿದರು. ಅವ್ವ ಊರಿನಿಂದ ಬಂದು ಅಕ್ಕನ ಶವಸಂಸ್ಕಾರ, ತಿಂಗಳ ತಿಥಿ ಎಲ್ಲಾ ಮುಗಿಸಿಕೊಂಡು ನನಗೆ, 'ನಿನ್ನ ಮಾವನಿಗೆ ಇನ್ನು ಯಾರು ದಿಕ್ಕು? ಅವರು ದೇವರಂಥ ಮನುಷ್ಯ! ಅವರ ಯೋಗಕ್ಷೇಮ ನೋಡಿಕೊಂಡು ಇಲ್ಲೇ ಇದ್ದು ಬಿಡು' ಎಂದು ಹೇಳಿ ಹೊರಟು ಹೋದಳು. ನಾನೂ ಅವ್ವನಿಗೆ ನಿನ್ನ ಜೊತೆ ಬರ್ತೀನಿ ಅಂದೆ. ಆದರೆ, ಅವ್ವ, 'ಬೇಡ, ನಿನ್ನ ಹಣೆಯಲ್ಲಿ ಹೇಗೆ ಬರೆದಿದೆಯೋ ಯಾರಿಗೆ ಗೊತ್ತು? ಇಲ್ಲೇ ಇರು. ಮೇಲೆ ನಿಮ್ಮ ಮಾವನಿಗೆ ಯಾರೂ ದಿಕ್ಕಿಲ್ಲ, ಅವರಿಗೆ ಅಪ್ಪ ಇಲ್ಲ, ಅವ್ವ ಇಲ್ಲ, ಹಿಂದೆ ಮುಂದೆ ಯಾರೂ ಇಲ್ಲ. ಇಲ್ಲಿ ನಿನಗೆ ಯಾವುದಕ್ಕೂ ಕಷ್ಟವಾಗಲ್ಲ. ನಿನ್ನನ್ನು ನಿಮ್ಮ ಮಾವ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳಿಗಿಂತಲೂ ಹೆಚ್ಚಿಗೆ ನೋಡಿಕೊಳ್ತಾರೆ' ಎಂದು ಹೇಳಿ ಹೊರಟು